## ಗುಂಡ ಮಾಡಲಾಗದ ದಾನ



'ಪ್ರಪಂಚದಲ್ಲಿ ಮಾಡಲಾಗದೇ ಇರೋ ದಾನ ಯಾವುದು ಮಕ್ಕಳೇ' ಅಂತ ತರಗತಿಯಲ್ಲಿ ಮೇಡಂ ಕೇಳಿದಾಗ 'ನಾನೇ ಹೇಳ್ತೀನಿ ಮೇಡಂ...'ಅಂದ ಉಂಡಾಡಿ ಗುಂಡ ಉಶ್, ಉಶ್ಯಪ್ಪಾ ಅಂತ ಏದುಸಿರು ಬಿಡುತ್ತಾ.. ನಿಧಾನವಾಗಿ ಎದ್ದು ನಿಂತ...

'ಮೇಡಂ. ಪ್ರಪಂಚದಲ್ಲಿ ದಾನ ಮಾಡಲಾಗದ್ದು ನನ್ನ ಈ ರೀತಿಯ ಒಬೆಸಿಟಿ, ಎಲ್ರೂ ನನ್ನನ್ನು ಮರಿ ಆನೆ ಅಂತಾರೆ ಮೇಡಂ.. ಯಾರಿಗಾದ್ರೂ ನಾನು ನನ್ನ ಓವರ್ ವೇಯ್ಟ್‌ನಲ್ಲಿ ಸ್ವಲ್ಪಾನಾದ್ರೂ ದಾನ ಮಾಡೋಕಾಗುತ್ತಾ ನೀವೇ ಹೇಳಿ?' ಅಂತ ಅವನೇ ಅವನ ಬಗ್ಗೆ ಹಾಸ್ಯ ಮಾಡಿಕೊಂಡಾಗ ಮೇಡಂ ಹಾಗೂ ಮಕ್ಕಳಾದಿಯಾಗಿ ಎಲ್ಲರೂ ಮನಸಾರೆ ನಕ್ಕರು.

'ಸರಿ, ಈಗೇನು ಮಾಡ್ಬೇಕು ಅಂತಿದೀಯಾ' ಅಂತ ಕೇಳಿದ ಮೇಡಂಗೆ, 'ಇನ್ಮುಂದೆ ಪಿಜ್ಜಾ, ಬರ್ಗರ್ ತಿನ್ನೋದನ್ನೇ ಬಿಟ್ಟು ಬಿಡ್ತೀನಿ ಅದೇ ನಾನು ಮಾಡೋ ಒಳ್ಳೆಯ ದಾನ' ಅಂದ. '

'ವಾಹ್...! ಶಭಾಷ್ ಗುಂಡಾ.. ನಿನ್ನ ಈ ಡಿಸಿಷನ್ ಎಲ್ಲಾ ಮಕ್ಕಳಿಗೂ ಅವರ ಆರೋಗ್ಯ ಕಾಪಾಡುವ ಒಳ್ಳೆಯ ಮಾರ್ಗ ಕೂಡಾ' ಅಂದ್ರು.

**ಸುಮನಾ**

---

## ಯಾರು ಹಿರಿಯರು?

ಮನೆಯೊಂದರಲ್ಲಿ ಹತ್ತಾರು ಮಂದಿ ಹೆಂಗಳೆಯರು ಸೇರಿ ವಿಪರೀತ ಮಾತನಾಡುತ್ತಿದ್ದರು. ಸದ್ಯಕ್ಕೆ ಅವರ ಮಾತು ನಿಲ್ಲುವಂತಿರಲಿಲ್ಲ.

ಹೀಗೆಯೇ ಇವರು ಎಷ್ಟು ಹೊತ್ತಾದರೂ ಮಾತನಾಡುತ್ತಲೇ ಇರುತ್ತಾರೆ ಎಂದು ತಿಳಿದ ಆ ಮನೆಯ ಅಜ್ಜಿ ಅವರಲ್ಲಿಗೆ ಬಂದು 'ನೋಡಿ ನೀವೇನು ಮಾತನಾಡುತ್ತಿರುವಿರೋ ಅದು ಯಾರಿಗೂ ಅರ್ಥವಾಗುವುದಿಲ್ಲ. ಈಗ ನಾನು ಹೇಳಿದಂತೆ ಮಾಡಿ, ನಿಮ್ಮಲ್ಲಿ ಯಾರು ಹಿರಿಯರು ಅವರು ಮೊದಲು ಮಾತನಾಡಿ, ನಂತರ ಇತರರು ಮಾತಾಡಿ' ಎಂದರು.

ಆಗ ಯಾರೂ ಮಾತನಾಡಲು ಮುಂದೆ ಬರಲಿಲ್ಲ, ಆಮೇಲೆ ಯಾರು ಯಾವ ಮಾತನ್ನು ಆಡಲೇ ಇಲ್ಲ!

**ಶಂಕರೇಗೌಡ ತುಂಬಕೆರೆ**



ಕಲೆ: ಗಣೇಶ ಆಚಾರ್ಯ